## ಪರ್ಯಾಯ ಶೈಕ್ಷಣಿಕ ಯೋಜನೆ 2021–2022

**ತರಗತಿ : 6** **ಪ್ರಥಮ ಭಾಷೆ : ಕನ್ನಡ** **ಮಾಹೆ : ಮಾರ್ಚ್–2022**

**ಪಾಠ : ಕರ್ನಾಟಕ ಏಕೀಕರಣ**

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಮಾರ್ಚ್ 1 ನೇ ವಾರ** | * ಕ್ಷೇತ್ರ : ಬರೆಯುವುದು ಸರಳ ಕ್ರಿಯಾತ್ಮಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಬರವಣಿಗೆಯಲ್ಲಿ ಬಳಸುವುದು. | ಚಟುವಟಿಕೆ 1: ಉಕ್ತಲೇಖನ<br>ಒತ್ತಕ್ಷರವನ್ನೊಳಗೊಂಡ 10 ಪದಗಳನ್ನು ಹೇಳಿ ಬರೆಸುವುದು<br>ಚಟುವಟಿಕೆ 2:<br>ಲೇಖನ ಚಿಹ್ನೆಗಳನ್ನು ಬಳಸಿಕೊಂಡು ಕೆಳಗಿನ ವಾಕ್ಯಗಳನ್ನು ಬರೆಯಿರಿ.<br>1. ನೀನು ಎಲ್ಲಿಗೆ ಹೊರಟೆ<br>2. ಆಹಾ ಈ ಮನೆ ಬಹಳ ಅದ್ಭುತವಾಗಿದೆ<br>3. ಮಕ್ಕಳೇ ಈಗ ಬರೆಯಲು ಪ್ರಾರಂಭಿಸಿ ಎಂದು ಶಿಕ್ಷಕಿ ಹೇಳಿದರು<br>4. 1896 ರಲ್ಲಿ ವಾಗ್ಭೂಷಣ ಎಂಬ ಮಾಸಪತ್ರಿಕೆ ಆರಂಭಿಸಲಾಯಿತು | ವೀಕ್ಷಣೆ<br>ಅವಲೋಕನ<br>ಅಭ್ಯಾಸದ ಹಾಳೆ |
| | | * ಪಠ್ಯಾಂಶ : ಶಿಕ್ಷಕರ ಓದು | 'ಕರ್ನಾಟಕ ಏಕೀಕರಣ' ಪಠ್ಯಭಾಗವನ್ನು ಶಿಕ್ಷಕರು ಸ್ಪಷ್ಟವಾಗಿ ಓದಿ ಮುಖ್ಯ ಅಂಶಗಳನ್ನು ಗುರುತು ಹಾಕಿಸುವುದು. | ವೀಕ್ಷಣೆ |
| | | * ಮಕ್ಕಳ ಓದು | * ಪಠ್ಯಾಂಶವನ್ನು ಮಕ್ಕಳಿಂದ ಓದಿಸುವುದು. | |

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | * ಹೊಸಪದಗಳ ಪರಿಚಯ | * ಆಕಾಶವಾಣಿ = ರೇಡಿಯೋ, ಬಾನುಲಿ<br>* ವಾಣಿ = ಧ್ವನಿ<br>* ಆಕಾಶವಾಣಿ = ಆಕಾಶದಲ್ಲಿ ಕೇಳುವ ಧ್ವನಿ<br>ಹೀಗೆ ಹೊಸಪದಗಳನ್ನು ಪರಿಚಯಿಸುತ್ತಾ ಮುಂದುವರಿಸುವುದು | ಅವಲೋಕನ |
| | | * ಮುಖ್ಯ ಅಂಶಗಳ ವಿವರಣೆ | * ಪ್ರಶ್ನೆಗಳಿಗೆ ಉತ್ತರ ಹುಡುಕಿಸುವ ಮೂಲಕ ಬಿಟ್ಟ ಸ್ಥಳ ಭರ್ತಿ ಮಾಡಿಸುವುದು | ಅಭ್ಯಾಸದ ಹಾಳೆ |
| | **ಮಾರ್ಚ್ 2 ನೇ ವಾರ** | * ವೃದ್ಧಿಸಂಧಿಯ ಅರ್ಥ ಉದಾಹರಣೆಗಳ ಮೂಲಕ ಸ್ಪಷ್ಟವಾಗಿ ಅರಿಯುವುದು. | ಅ,ಆ+ಏ,ಐ = ಐ<br>ಅ,ಆ+ಓ,ಔ = ಔ<br>ಏಕ+ಏಕ=ಏಕೈಕ<br>ಬ್ರಹ್ಮ+ಐಕ್ಯ=ಬ್ರಹ್ಮೈಕ್ಯ<br>ಶಿವ+ಐಕ್ಯ=ಶಿವೈಕ್ಯ<br>ವನ+ಔಷಧ=ವನೌಷಧ<br>ಮಹಾ+ಔದಾರ್ಯ=ಮಹೌದಾರ್ಯ<br>ಸಿದ್ಧ+ಔಷಧ=ಸಿದ್ಧೌಷಧ<br>ಜಲ+ಓಘ=ಜಲೌಘ<br>ವಿದ್ಯಾ+ಐಶ್ವರ್ಯ=ವಿದ್ಯೈಶ್ವರ್ಯ<br>ಅಷ್ಟ+ಐಶ್ವರ್ಯ=ಅಷ್ಟೈಶ್ವರ್ಯ<br>ಲೋಕ+ಏಕ=ಲೋಕೈಕ | ಅಭ್ಯಾಸದ ಹಾಳೆ |

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | * ಯಣ್ ಸಂಧಿಯ ಅರ್ಥ | * ಸಂಧಿಕಾರ್ಯ ನಡೆದಾಗ ಪೂರ್ವಪದದ ಕೊನೆಯಲ್ಲಿ ಇ,ಉ,ಋ ಇದ್ದು ಉತ್ತರಪದದ ಮೊದಲು ಯಾವುದೇ ಅಕ್ಷರ ಬಂದರೂ ಪೂರ್ವಪದದ ಇ ಬದಲಿಗೆ 'ಯ' ;<br>ಉ ಬದಲಿಗೆ 'ವ' ; ಋ ಬದಲಿಗೆ 'ಅರ್' ಕಾರ ಆದೇಶವಾಗಿ ಬರುವ ಸಂಧಿಗೆ ಯಣ್ ಸಂಧಿ ಎನ್ನುವರು<br>ಜಾತಿ + ಅತೀತ = ಜಾತ್ಯಾತೀತ<br>ಇ + ಅ = ಯ<br>ಪಿತೃ + ಆರ್ಜಿತ = ಪಿತ್ರಾರ್ಜಿತ<br>ಇ + ಯಾವುದೇ ವರ್ಣ = <u>ಯ</u> ವತ್ತು<br>ಉ + ಯಾವುದೇ ವರ್ಣ = <u>ವ</u> ವತ್ತು<br>ಋ + ಯಾವುದೇ ವರ್ಣ = <u>ರ</u> ವತ್ತು | ಅಭ್ಯಾಸದ ಹಾಳೆ |
| | | * ಅಭ್ಯಾಸ ಚಟುವಟಿಕೆ | * ಸಿರಿಕನ್ನಡ–6 ಪುಟ ಸಂಖ್ಯೆ 62, 63 ರಲ್ಲಿರುವ ಅಭ್ಯಾಸ ಚಟುವಟಿಕೆಯನ್ನು ಮಕ್ಕಳಿಂದಲೇ ಮಾಡಿಸಲು ಪ್ರಯತ್ನಿಸುವುದು | ಅವಲೋಕನ |

## ಪರ್ಯಾಯ ಶೈಕ್ಷಣಿಕ ಯೋಜನೆ 2021–2022

**ತರಗತಿ : 6** **ಪ್ರಥಮ ಭಾಷೆ : ಕನ್ನಡ** **ಮಾಹೆ : ಮಾರ್ಚ್–2022**

**ಪೂರಕ ಪಾಠ : ಇರುವೆ**

| ಕ್ರ. ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | **ಮಾರ್ಚ್ 3 ನೇ ವಾರ** | * ಕ್ಷೇತ್ರ : ಆಲಿಸುವುದು ಆಲಿಸಿದ ಬಳಿಕ ಹೇಗೆ? ಏನು? ಯಾವ? ಎಂಬ ಪ್ರಶ್ನೆಗಳಿಗೆ ಉತ್ತರಿಸುವುದು. | * ಅನೇಕ ಮಕ್ಕಳ ಕಥೆ ಹಾಗೂ ಕವನಗಳನ್ನು ಆಲಿಸಲು ಅವಕಾಶ ಮಾಡಿಕೊಟ್ಟು ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಮೊದಲೇ ತಯಾರಿಸಿಕೊಂಡು ಮಕ್ಕಳನ್ನು ಕೇಳುತ್ತಾ ಉತ್ತರ ಪಡೆಯುವುದು.<br><br>* ಎಲ್ಲಾ ಮಕ್ಕಳೂ ಕಥೆ ಅಥವಾ ಕವನ ಸಂಗ್ರಹಿಸಿಕೊಂಡು ಬಂದು ತರಗತಿಯಲ್ಲಿ ಓದಲು ಸೂಚಿಸುವುದು.<br><br>* ಆ ಕಥೆ ಕವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ತಯಾರಿಸಲು ಸೂಚಿಸುವುದು. | ವೀಕ್ಷಣೆ<br><br>ಅವಲೋಕನ<br>ಗುಂಪು ಚಟುವಟಿಕೆ<br><br>ಅಭ್ಯಾಸದ ಹಾಳೆ |
| | | * ಇರುವೆ | * ಸಿರಿಕನ್ನಡ 6 ರ ಪುಟ ಸಂಖ್ಯೆ 127 ರಲ್ಲಿರುವ ಕವನವನ್ನು ಓದಿ, ಮಕ್ಕಳಿಂದ ಓದಿಸಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ಉತ್ತರ ಹೇಳಿಸಿ ಬರೆಸುವುದು. | ವೀಕ್ಷಣೆ |

ಅಭ್ಯಾಸದ ಹಾಳೆ – 1

ತರಗತಿ : 6 ಕರ್ನಾಟಕ ಏಕೀಕರಣ ಮಾರ್ಚ್ – 2022

☞ ಕೆಳಗಿನ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆ ಬಳಸಿ ಬರೆಯಿರಿ:

1. ಕಾರ್ಯಕ್ರಮ ಮುಗಿಸಿ ನಂತರ ಚರ್ಚೆ ಪ್ರಾರಂಭಿಸಿದರು

2. ಮಕ್ಕಳೇ ನಾವೆಲ್ಲರೂ ಒಟ್ಟಾಗಿ ದುಡಿಯೋಣ

3. ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂಬ ಗೀತೆಯನ್ನು ಬರೆದವರು

   ಹುಯಿಲಗೋಳ ನಾರಾಯಣರಾವ್

4. 1956 ರ ನವೆಂಬರ್ 1 ರಂದು ಮೈಸೂರು ರಾಜ್ಯ ಎಂದು ಕರೆಯಲಾಯಿತು

5. ನಿಮಗೇಕೆ ತೊಂದರೆ ಕೊಡಬೇಕು

6. ನಾವೆಲ್ಲರೂ ರೇಡಿಯೋ ಕಾರ್ಯಕ್ರಮವನ್ನು ಆಲಿಸೋಣ ಎಂದು ಶಿಕ್ಷಕಿಯು ಮಕ್ಕಳಿಗೆ ಹೇಳಿದರು

☞ ಕೆಳಗಿನ ಪದಗಳಿಗೆ ಸೂಕ್ತ ಒತ್ತಕ್ಷರ ಬಳಸಿ ಬರೆಯಿರಿ:



| | | |
|---|---|---|
| ನಾಯ | ಪಾರಂಭ | ಸರ |
| ಅಮ | ಆಮ | ಚಿನ |
| ಉತವ | ಶಿಕಕ | ಸಕರೆ |

## ಅಭ್ಯಾಸದ ಹಾಳೆ – 2

ತರಗತಿ : 6 | ಕರ್ನಾಟಕ ಏಕೀಕರಣ | ಮಾರ್ಚ್ – 2022

---

☞ ಬಿಟ್ಟ ಸ್ಥಳವನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ:

1. ಕರ್ನಾಟಕದಲ್ಲಿ ಮಾತನಾಡುವ ಭಾಷೆ ______________
2. 'ವಂಗಭಂಗ' ಚಳವಳಿ ಪ್ರಾರಂಭಿಸಿದವರು ______________
3. __________ ರ ಆಗಸ್ಟ್ __________ ರಂದು ಬ್ರಿಟಿಷ್ ಸರ್ಕಾರವು ಬಂಗಾಳದ ರಾಜ್ಯ ವಿಭಜನೆಗೆ ಮುಂದಾಯಿತು.
4. 20–07–1890 ರಲ್ಲಿ __________ ದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದರು.
5. ಕರ್ನಾಟಕ ವಿದ್ಯಾವರ್ಧಕ ಸಂಘವು 1896 ರಲ್ಲಿ __________ ಎಂಬ ಮಾಸಪತ್ರಿಕೆಯನ್ನು ಆರಂಭಿಸಿತು.
6. ____________ ರಲ್ಲಿ 'ಕರ್ನಾಟಕ ಸಭೆ' ಸಂಸ್ಥೆಯನ್ನು ಕಟ್ಟಿದರು.
7. ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿದ್ದರು.
8. 'ಕರ್ನಾಟಕ ಸಾಹಿತ್ಯ ಪರಿಷತ್ತು' __________ ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಯಾಯಿತು.
9. 'ಕರ್ನಾಟಕ ಸಾಹಿತ್ಯ ಪರಿಷತ್ತು' ಎಂಬುದು 'ಕನ್ನಡ ಸಾಹಿತ್ಯ ಪರಿಷತ್ತು' ಎಂಬುದಾಗಿ ಬದಲಾವಣೆಯಾದದ್ದು __________
10. 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಈ ಗೀತೆಯ ರಚನೆಕಾರರು __________
11. 'ಕರ್ನಾಟಕ ಸಭೆ' ಯ ಮೊದಲ ಕಾರ್ಯಕ್ರಮ __________ ರಂದು ನಡೆಯಿತು.
12. 'ಕರ್ನಾಟಕ ಸಭೆ' ಯ ಮೊದಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡವರು __________
13. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ______________
14. ಕನ್ನಡಿಗರನ್ನು ಒಗ್ಗೂಡಿಸಿ 'ಮೈಸೂರು ರಾಜ್ಯ' ಎಂದು ಕರೆದ ದಿನ __________
15. 'ಮೈಸೂರು ರಾಜ್ಯ'ವು 'ಕರ್ನಾಟಕ ರಾಜ್ಯ' ವೆಂದು ಹೆಸರು ಪಡೆದದ್ದು __________

☞ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:

1. ಕನ್ನಡ ಸಾಹಿತ್ಯ ಪರಿಷತ್ತಿನ ಧ್ಯೇಯೋದ್ದೇಶಗಳೇನು?

2. ವಂಗ–ಭಂಗ ಚಳವಳಿ ಎಂದರೇನು?

3. ವಿದ್ಯಾವರ್ಧಕ ಸಂಘದ ಕೆಲಸವೇನು?

4. ಕನ್ನಡದ ಪರವಾಗಿ ಹೋರಾಟ ಮಾಡಿದ ಮಹನೀಯರನ್ನು ಹೆಸರಿಸಿ.

ಅಭ್ಯಾಸದ ಹಾಳೆ – 3

ತರಗತಿ : 6 ಕರ್ನಾಟಕ ಏಕೀಕರಣ ಮಾರ್ಚ್ – 2022

☞ ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರು ಬರೆಯಿರಿ:

1. ಏಕೈಕ = ______________________________

2. ಬ್ರಹ್ಮೈಕ್ಯ = ______________________________

3. ಶಿವೈಕ್ಯ = ______________________________

4. ವನೌಷಧ = ______________________________

5. ಸಿದ್ಧೌಷಧ = ______________________________

6. ಜಲೌಘ = ______________________________

7. ಅಷ್ಟೈಶ್ವರ್ಯ = ______________________________

8. ಲೋಕೈಕ = ______________________________

9. ಜಾತ್ಯತೀತ = ______________________________

10. ಪಿತ್ರಾರ್ಜಿತ = ______________________________

11. ಅತ್ಯುತ್ತಮ = ______________________________

12. ಇತ್ಯಾದಿ = ______________________________

13. ಅತ್ಯಾಕರ್ಷಣೆ = ______________________________

14. ಅತ್ಯುತ್ಸಾಹ = ______________________________

15. ಪ್ರತ್ಯುಪಕಾರ = ______________________________

ಅಭ್ಯಾಸದ ಹಾಳೆ – 1

ತರಗತಿ : 6 ಪೂರಕ ಪಾಠ : ಇರುವೆ ಮಾರ್ಚ್ – 2022

☞ ಕೆಳಗಿನ ಪದ್ಯವನ್ನು ಓದುತ್ತಾ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:

**ಮಕ್ಕಳಾಟ**

ಬನ್ನಿ ಬನ್ನಿ ಬಾಲರೆಲ್ಲ
ಬಾಲಂಗೋಚಿ ಆಡುವ
ಬಯಲಿನಲ್ಲಿ ಓಡಿಕೊಂಡು
ಖುಷಿಯ ಪಡುತ ಕುಣಿಯುವ

ಮುಖದ ಮೇಲೆ ನಗುವ ಚೆಲ್ಲಿ
ಕೇಕೆ ಹಾಕಿ ಸಾಗುವ
ಅಪ್ಪ ಅಮ್ಮ ಗದರಿದಾಗ
ಮರದ ಮೇಲೆ ಅಡಗುವ

ಗಾಳಿ ಬೀಸಿ ಮಳೆಯು ಬರಲು
ಬರಿಯ ಮೈಯನೊಡ್ಡುವ
ಶೀತವಾಗಿ ನೆಗಡಿ ಬರಲು
ಔಷಧಿಯನು ಕುಡಿಯುವ

ನಮ್ಮ ಶಾಲೆಯನ್ನು ಶೀಘ್ರ
ನಾವೆ ಹೋಗಿ ತೆರೆಯುವ
ವಿದ್ಯೆ ಬುದ್ಧಿಯನ್ನು ಕಲಿಸೊ
ಗುರುಗಳನ್ನು ಒಲಿಸುವ

ಓದಿ ಜಾಣರಾಗಿ ನಾವು
ದೇಶಸೇವೆ ಮಾಡುವ
ನಮ್ಮ ಮಾತೃ ದೇಶವನ್ನು
ವಿಶ್ವಗುರು ಎನಿಸುವ

– ಭಾಸ್ಕರ್ ನೆಲ್ಯಾಡಿ

**ಪ್ರಶ್ನೆಗಳು:**

1. ಮಕ್ಕಳಾಟ ಪದ್ಯವನ್ನು ಬರೆದ ಕವಿ ಯಾರು?

2. ನಾವು ಯಾರನ್ನು ವಿಶ್ವಗುರು ಎನಿಸೋಣ?

3. ನಾವು ಯಾರನ್ನು ಒಲಿಸೋಣ?

4. ನಾವು ಯಾವಾಗ ಔಷಧಿ ಕುಡಿಯೋಣ?

5. ಮಕ್ಕಳು ಹೇಗೆ ಆಡುತ್ತಿದ್ದರು?

6. ನೆಗಡಿ ಹೇಗೆ ಬರುತ್ತದೆ?

7. ಶಾಲೆಯನ್ನು ಏಕೆ ತೆರೆಯಬೇಕು?

8. ಮಕ್ಕಳು ಯಾವ ಸೇವೆ ಮಾಡಬೇಕು?